# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | 882 |
| ಸದಸ್ಯರ ಹೆಸರು | ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 14-07-2023 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರಸಕ್ತ ವರ್ಷದಲ್ಲಿ ಕೊಪ್ಪಳ ಜಿಲ್ಲೆಗೆ ಒಟ್ಟು ಎಷ್ಟು ಟನ್ ರಸಗೊಬ್ಬರ ಸರಬರಾಜು ಮಾಡಲಾಗಿದೆ; (ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು) | 2023-24ನೇ ಸಾಲಿನಲ್ಲಿ ಕೊಪ್ಪಳ ಜಿಲ್ಲೆಗೆ ಏಪ್ರಿಲ್-2023 ರಿಂದ 06.07.2023 ರವರೆಗೆ ಒಟ್ಟು 56442 ಮೆ.ಟನ್ (ಡಿ.ಎ.ಪಿ-11830 ಮೆ.ಟನ್, ಎಂ.ಒ.ಪಿ-978 ಮೆ.ಟನ್, ಕಾಂಪ್ಲೆಕ್ಸ್-23584 ಮೆ.ಟನ್, ಯೂರಿಯಾ 19908 ಮೆ.ಟನ್ ಹಾಗೂ ಎಸ್.ಎಸ್.ಪಿ-143 ಮೆ.ಟನ್) ವಿವಿಧ ಗ್ರೇಡ್ ಗಳ ರಸಗೊಬ್ಬರ ಸರಬರಾಜಾಗಿರುತ್ತದೆ (ತಾಲ್ಲೂಕುವಾರು ಸರಬರಾಜು ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ). |
| ಆ) | ಕೃತಕ ಅಭಾವ ಸೃಷ್ಟಿಸಿ ಹೆಚ್ಚಿನ ಬೆಲೆಗೆ ರಸಗೊಬ್ಬರವನ್ನು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅಂತಹವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ; | ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನಲ್ಲಿ ಬೇಡಿಕೆಗನುಗುಣವಾಗಿ ವಿವಿಧ ಗ್ರೇಡ್ ಗಳ ರಸಗೊಬ್ಬರಗಳು ಸರಬರಾಜಾಗಿದ್ದು, ಕೊಪ್ಪಳ ಜಿಲ್ಲೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ರಸಗೊಬ್ಬರದ ದಾಸ್ತಾನಿದ್ದು, ಕೃತಕ ಅಭಾವ ಸೃಷ್ಟಿಸಿ ಹೆಚ್ಚಿನ ಬೆಲೆಗೆ ರಸಗೊಬ್ಬರವನ್ನು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿರುವ ಪ್ರಕರಣ ವರದಿಯಾಗಿರುವುದಿಲ್ಲ. |
| ಇ) | ಹೆಚ್ಚಿನ ಬೆಲೆಗೆ ಕಾಳಸಂತೆಯಲ್ಲಿ ಮಾರಾಟ ಮಾಡುವುದನ್ನು ತಡೆಯಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? | ಸರ್ಕಾರವು ರಸಗೊಬ್ಬರ (ನಿಯಂತ್ರಣ) ಆದೇಶ, 1985 ಮತ್ತು ಅಗತ್ಯ ವಸ್ತುಗಳ ಕಾಯ್ದೆ, 1955ರ ಉಲ್ಲಂಘನೆಗಳಿಗೆ ಸಂಬಂಧಿಸಿದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ರಾಜ್ಯದಲ್ಲಿ ಅಪರ ಕೃಷಿ ನಿರ್ದೇಶಕರ ನೇತೃತ್ವದಲ್ಲಿ ಜಾಗೃತಕೋಶ ರಚಿಸಲಾಗಿರುತ್ತದೆ ಮತ್ತು ಇವರ ಅಧೀನದಲ್ಲಿ ರಾಜ್ಯದ 4 ವಿಭಾಗಗಳಲ್ಲಿ (ಬೆಂಗಳೂರು, ಮೈಸೂರು, ಕಲಬುರ್ಗಿ ಮತ್ತು ಬೆಳಗಾವಿ) ಜಂಟಿ ಕೃಷಿ ನಿರ್ದೇಶಕರು(ಜಾಗೃತ ಕೋಶ) ಕಾರ್ಯನಿರ್ವಹಿಸುತ್ತಿದ್ದಾರೆ. ಜಾಗೃತ ಕೋಶದ ಅಧಿಕಾರಿಗಳು, ಜಂಟಿ ಕೃಷಿ ನಿರ್ದೇಶಕರ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ ಕೃಷಿ ನಿರ್ದೇಶಕರು(ಜಾರಿದಳ) ಮತ್ತು ಅಧಿಸೂಚಿಸಿರುವ ರಸಗೊಬ್ಬರ ಪರಿವೀಕ್ಷಕರು ದೂರುಗಳನ್ನು ಆಧರಿಸಿ ಮತ್ತು ಅವರ ವ್ಯಾಪ್ತಿಯಲ್ಲಿನ ರಸಗೊಬ್ಬರ ಮಾರಾಟ ಮಳಿಗೆಗಳಿಗೆ |

| | | |
|---|---|---|
| | | ನಿಯಮಿತವಾಗಿ ಭೇಟಿ ನೀಡಿ, ಪರಿಶೀಲನೆಯನ್ನು ಕೈಗೊಂಡು ಉಲ್ಲಂಘನೆ ಕಂಡು ಬಂದಲ್ಲಿ ಸೂಕ್ತ ಕಾನೂನು ಕ್ರಮ ಕೈಗೊಳ್ಳುತ್ತಿದ್ದಾರೆ.<br><br>ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಹಂಗಾಮು ಪೂರ್ವದಲ್ಲಿಯೇ ಎಲ್ಲಾ ರಸಗೊಬ್ಬರ ಮಾರಾಟಗಾರರಿಗೆ ಸಭೆಗಳನ್ನು ಆಯೋಜಿಸಿ, ರಸಗೊಬ್ಬರಗಳನ್ನು ರೈತರಿಗೆ ಎಮ್.ಆರ್.ಪಿ ದರದಲ್ಲಿಯೇ ವಿತರಿಸಲು ಹಾಗೂ ಕಡ್ಡಾಯವಾಗಿ ಪ್ರತಿದಿನ ರೈತರಿಗೆ ಕಾಣುವಂತೆ ಮಳಿಗೆಯ ಮುಂಭಾಗದಲ್ಲಿ ದಾಸ್ತಾನು ಮತ್ತು ದರ ಪ್ರದರ್ಶಿಸಲು ಹಾಗೂ ರಸಗೊಬ್ಬರ ನಿಯಂತ್ರಣ ಆದೇಶ,1985 ಉಲ್ಲಂಘಿಸಿದಲ್ಲಿ ಕಠಿಣ ಕ್ರಮ ಕೈಗೊಳ್ಳುವುದರ ಬಗ್ಗೆ ಎಚ್ಚರಿಕೆ ನೀಡಲಾಗಿದೆ. |

**ಸಂಖ್ಯೆ: AGRI/110/ACT/2023**

**(ಎನ್. ಚಲುವರಾಯಸ್ವಾಮಿ)**
ಕೃಷಿ ಸಚಿವರು

## ಅನುಬಂಧ

### ಮುಂಗಾರು 2023 ನೇ ಸಾಲಿನ ರಸಗೊಬ್ಬರ ಸರಬರಾಜು ವಿವರ(ದಿನಾಂಕ 06.07.2023 ರವರೆಗೆ) ಮೆ. ಟನ್ ಗಳಲ್ಲಿ

### ಕೊಪ್ಪಳ ಜಿಲ್ಲೆ

| ಕ್ರ. ಸಂ. | ರಸಗೊಬ್ಬರ | ಮುಂಗಾರು 2023 ಬೇಡಿಕೆ | ಏಪ್ರಿಲ್ ರಿಂದ ಜುಲೈ ಮಾಹೆಗಳ 2023 ರ ಬೇಡಿಕೆ | ಆರಂಭಿಕ ಶಿಲ್ಕು(01.04.2023 ರಂತೆ) | ಸರಬರಾಜು 01.04.2023 ರಿಂದ 6.07.2023 ರವರೆಗೆ | ಒಟ್ಟು ದಾಸ್ತಾನು | ರಸಗೊಬ್ಬರ ಮಾರಾಟ | ಉಳಿಕೆ ದಾಸ್ತಾನು ಪ್ರಮಾಣ 06.07.2023 ರಂತೆ |
|---|---|---|---|---|---|---|---|---|
| **1** | **2** | **3** | **4** | **5** | **6** | **7(5+6)** | **8(7-9)** | **9** |
| 1 | ಡಿ.ಎ.ಪಿ | 16880 | 12746 | 9519 | 11830 | 21349 | 8681 | 12668 |
| 2 | ಎಂ.ಒ.ಪಿ | 3368 | 2196 | 513 | 978 | 1491 | 385 | 1106 |
| 3 | ಕಾಂಪ್ಲೆಕ್ಸ್ | 35916 | 24204 | 16434 | 23584 | 40018 | 7198 | 32820 |
| 4 | ಯೂರಿಯಾ | 33263 | 20634 | 20140 | 19908 | 40048 | 15543 | 24505 |
| 5 | ಎಸ್.ಎಸ್.ಪಿ | 3239 | 2204 | 372 | 143 | 515 | 130 | 385 |
| | ಒಟ್ಟು | **92666** | **61984** | **46978** | **56442** | **103420** | **31936** | **71484** |

| ಕ್ರ. ಸಂ. | ರಸಗೊಬ್ಬರ | ಮುಂಗಾರು 2023 ಬೇಡಿಕೆ | ಏಪ್ರಿಲ್ ರಿಂದ ಜುಲೈ ಮಾಹೆಗಳ 2023 ರ ಬೇಡಿಕೆ | ಆರಂಭಿಕ ಶಿಲ್ಕು(01.04.2023 ರಂತೆ) | ಸರಬರಾಜು 01.04.2023 ರಿಂದ 6.07.2023 ರವರೆಗೆ | ಒಟ್ಟು ದಾಸ್ತಾನು | ರಸಗೊಬ್ಬರ ಮಾರಾಟ | ಉಳಿಕೆ ದಾಸ್ತಾನು ಪ್ರಮಾಣ 06.07.2023 ರಂತೆ |
|---|---|---|---|---|---|---|---|---|
| | **ಕೊಪ್ಪಳ ತಾಲ್ಲೂಕು** | | | | | | | |
| 1 | ಡಿ.ಎ.ಪಿ | 4726 | 3568 | 2665 | 3076 | 5741 | 2447 | 3294 |
| 2 | ಎಂ.ಒ.ಪಿ | 943 | 615 | 144 | 254 | 398 | 111 | 288 |
| 3 | ಕಾಂಪ್ಲೆಕ್ಸ್ | 10056 | 6777 | 4602 | 6132 | 10734 | 2201 | 8533 |
| 4 | ಯೂರಿಯಾ | 9314 | 5777 | 6849 | 5176 | 12025 | 5654 | 6371 |
| 5 | ಎಸ್.ಎಸ್.ಪಿ | 907 | 617 | 126 | 37 | 163 | 63 | 100 |
| | ಒಟ್ಟು | **25946** | **17355** | **14386** | **14675** | **29061** | **10475** | **18586** |
| | **ಕುಷ್ಟಗಿ ತಾಲ್ಲೂಕು** | | | | | | | |
| 1 | ಡಿ.ಎ.ಪಿ | 3376 | 2549 | 1428 | 1656 | 3084 | 1311 | 1774 |
| 2 | ಎಂ.ಒ.ಪಿ | 674 | 439 | 77 | 137 | 214 | 59 | 155 |
| 3 | ಕಾಂಪ್ಲೆಕ್ಸ್ | 7183 | 4841 | 2465 | 3302 | 5767 | 1172 | 4595 |
| 4 | ಯೂರಿಯಾ | 6653 | 4127 | 2014 | 2787 | 4801 | 1370 | 3431 |
| 5 | ಎಸ್.ಎಸ್.ಪಿ | 648 | 441 | 37 | 20 | 57 | 3 | 54 |
| | ಒಟ್ಟು | **18534** | **12397** | **6021** | **7902** | **13923** | **3915** | **10008** |
| | **ಯಲಬುರ್ಗಾ ತಾಲ್ಲೂಕು** | | | | | | | |
| 1 | ಡಿ.ಎ.ಪಿ | 3545 | 2676 | 1523 | 1774 | 3297 | 1397 | 1900 |
| 2 | ಎಂ.ಒ.ಪಿ | 707 | 461 | 82 | 147 | 229 | 63 | 166 |
| 3 | ಕಾಂಪ್ಲೆಕ್ಸ್ | 7542 | 5083 | 2629 | 3538 | 6167 | 1244 | 4923 |
| 4 | ಯೂರಿಯಾ | 6985 | 4333 | 2014 | 2986 | 5000 | 1324 | 3676 |
| 5 | ಎಸ್.ಎಸ್.ಪಿ | 680 | 463 | 37 | 22 | 59 | 1 | 58 |
| | ಒಟ್ಟು | **19459** | **13015** | **6285** | **8466** | **14751** | **4029** | **10723** |
| | **ಗಂಗಾವತಿ ತಾಲ್ಲೂಕು** | | | | | | | |
| 1 | ಡಿ.ಎ.ಪಿ | 5233 | 3953 | 3903 | 5323 | 9226 | 3526 | 5701 |
| 2 | ಎಂ.ಒ.ಪಿ | 1044 | 681 | 210 | 440 | 650 | 152 | 498 |
| 3 | ಕಾಂಪ್ಲೆಕ್ಸ್ | 11134 | 7504 | 6738 | 10613 | 17351 | 2582 | 14769 |
| 4 | ಯೂರಿಯಾ | 10312 | 6397 | 9264 | 8959 | 18223 | 7195 | 11027 |
| 5 | ಎಸ್.ಎಸ್.ಪಿ | 1004 | 683 | 171 | 65 | 236 | 62 | 173 |
| | ಒಟ್ಟು | **28727** | **19217** | **20286** | **25399** | **45685** | **13517** | **32168** |
| | ಜಿಲ್ಲೆಯ ಒಟ್ಟು | **92666** | **61984** | **46978** | **56442** | **103420** | **31936** | **71484** |